E-Scan

KLE CENTENARY

K. L. E. Society's

# ARTS AND COMMERCE COLLEGE,

Gadag – Betageri – 582 101

# MENUSTRUAL HYGIENE AWARENESS PROGRAMME

Date:24-11-2020

| | | |
|---|---|---|
| 1 | Name of the Activity/Event | Menustrual Hygiene Awareness Programme |
| 2 | Date of Activity/Event | 24-11-2020 |
| 3 | Organized by/Name of the committee | YRC |
| 4 | Name of the Association | Inner Wheel Club and YRC |
| 5 | Place of Activity/event | Beladadi Tanda, Brahmanand Pura |
| 6 | Type of activity/Event | Awareness Programme |
| 7 | Activity/Event objectives | ➢ To educate and make them aware about the environmental pollution and health hazards associated with them.<br>➢ To give awareness to created and emphasize the use of reusable sanitary products or the natural sanitary products made from materials like banana fibre, bamboo fibre, sea sponges, water hyacinth, and so on |
| 8 | Participation | Students: 02; Faculty: 02; Benificiaries: 55 |
| 9 | Enclosures: | 1. Report<br>2. Photos<br>3. Press Clipping<br>4. Regi List<br>5. |

**REPORT:**

In association with Inner Wheel Club, Gadag-Betageri and Youth Red Cross of our college organized Awareness Programme on Menustrual Hygiene at "Beladadi

CO-ORDINATOR
IQAC
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College
GADAG - BETGERI - 582 101

K.L.E. Society's
Arts and Commerce College, Gadag

Tanda, Brahmanand Pura" Totally 55 girls and Women were made aware of menstrual hygiene, associated topics and use of sanitary napkins.

A large number of adolescent girls from rural areas of India are still not aware about issues related to menstruation and maintaining personal hygiene during this period and dealing with associated physical problems. They usually don't get a proper platform to get information or discuss such issues. An awareness session was conducted in which all associated topics related to menstruation were explained to adolescent school girls, like what is menstruation, calculation of the period, physical problems faced by girls during their periods and ways to deal with it, maintaining personal hygiene during this period and importance of maintaining hygiene, avoiding the traditional methods of using dirty cloths and promoting use of sanitary napkins, etc. Programme Co-ordinator of YRC Smt Veena Tirlapur briefed all the information regards to this pogramme. Traditional myths and misconceptions in rural areas related to menstruation were discussed. FAQs by the girls and Women related to the topic were answered by the facilitator. And the inner wheel Club President Smt Sum Patil Gave awareness about cleanliness and Distributed 200 Sanitary Napkin to the Girls and Women.

PHOTOS: Distribution of Sanitary Napkins to Women and Girls at Beladadi







CO-ORDINATOR
IQAC
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College,
GADAG - BETGERI - 582 101

K. L. E. Society's
# Arts and Commerce College,
Re- Accredited by NAAC in 3rd Cycle with "B++" Grade
GADAG, KARNATAKA. INDIA -582101
Contacts: 9482547599,9482366466
Email: kleswcg@yahoo.com klesaccollege@gmail.com Website: www.klesaccollege.edu.in


## Menstrual Hygiene awareness Beladadi Tanda on 25.11.2020

| Sl.No | Student Names | Sign |
|---|---|---|
| 1 | SARASWATI RADDER | Saraswati . R |
| 2 | DYAMAVVA VADDAR | Divya |

CO-ORDINATOR
IQAC
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College,
GADAG - BETGERI - 582 101

K.L.E. Society's
Arts and Commerce College, Gadag





**Giving Menstrual Hygiene Awareness to the women folk**





**Women and Teen Girls attended Menstrual Hygiene Awareness Programme**

CO-ORDINATOR
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College
GADAG - BETGERI - 582 101

K.L.E. Society's
Arts and Commerce College, Gadag

Press Report: Vijay Sakshi newspaper

# ಋತುಚಕ್ರದ ಕಾಳಜಿ, ನೈರ್ಮಲ್ಯ ಅಗತ್ಯ: ವೀಣಾ



■ ವಿಜಯಸಾಕ್ಷಿ ಸುದ್ದಿ, ಗದಗ

ಪ್ರಪಂಚದಾದ್ಯಂತ ಲಕ್ಷಾಂತರ ಹೆಣ್ಣುಮಕ್ಕಳು ಮತ್ತು ಮಹಿಳೆಯರಲ್ಲಿ ಅನೇಕರು ಮಾಸಿಕ ಋತುಚಕ್ರದ ಮತ್ತು ವೈಯಕ್ತಿಕ ನೈರ್ಮಲ್ಯವನ್ನು ನಿಭಾಯಿಸಲು ವಿಫಲರಾಗಿದ್ದಾರೆ. ಆರೋಗ್ಯಕರ ರೀತಿಯಲ್ಲಿ ಅದರ ನಿರ್ವಹಣೆ ಅವರಿಗೆ ಅಸಾಧ್ಯವಾಗುತ್ತಿದೆ. ಆದ್ದರಿಂದ ಈ ವಿಷಯದಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ. ಅದರಲ್ಲೂ ಗ್ರಾಮೀಣ ಭಾಗದ ಹದಿಹರೆಯದ ಹೆಣ್ಣುಮಕ್ಕಳಿಗೆ ಮತ್ತು ಮಹಿಳೆಯರಿಗೆ ತಿಳುವಳಿಕೆ ನೀಡಬೇಕಿದೆ. ಈ ನಿಟ್ಟಿನಲ್ಲಿ ಗದುಗಿನ ಕೆ.ಎಲ್.ಇ. ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ 'ಯೂಥ್ ರೆಡ್‌ಕ್ರಾಸ್' ಘಟಕ ಮತ್ತು ಗದಗ-ಬೆಟಗೇರಿ ಇನ್ನರ್ ವ್ಹೀಲ್ ಕ್ಲಬ್ ಆಶ್ರಯದಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ವೈಯಕ್ತಿಕ ಋತುಚಕ್ರದ ಬಗ್ಗೆ ತಿಳುವಳಿಕೆ ಕಾರ್ಯಕ್ರಮವನ್ನು ಬೆಳಧಡಿ [illegible] ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಮಹಾವಿದ್ಯಾಲಯದ ಗೃಹವಿಜ್ಞಾನ ಪ್ರಾಧ್ಯಾಪಕಿ ವೀಣಾ ತಿರ್ಲಾಪುರ, ಋತುಚಕ್ರದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಕಾಳಜಿ ಮತ್ತು ನೈರ್ಮಲ್ಯ ಕುರಿತಂತೆ ದೇಶದ ಗ್ರಾಮೀಣ ಪರಿಸರದ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ತಿಳುವಳಿಕೆ ಮೂಡಿಸುವುದು ಅವಶ್ಯವಾಗಿದೆ. ಋತುಚಕ್ರದ ಸಮಯ, ಅವಧಿಯ ಲೆಕ್ಕಾಚಾರ, ಈ ಅವಧಿಯಲ್ಲಿ ಹೆಣ್ಣು ಮಕ್ಕಳು ಎದುರಿಸುವ ದೈಹಿಕ ತೊಂದರೆಗಳು ಮತ್ತು ನಿಭಾಯಿಸುವ ವಿಧಾನಗಳು, ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳುವುದು, ಹಳೆಯ ಬಟ್ಟೆಗಳನ್ನು ಬಳಸುವ ಸಾಂಪ್ರದಾಯಿಕ ವಿಧಾನಗಳನ್ನು ತಪ್ಪಿಸುವುದು ಮತ್ತು ನೈರ್ಮಲ್ಯಕರ ವಸ್ತುಗಳ ಬಳಕೆಯನ್ನು ಪ್ರೋತ್ಸಾಹಿಸುವ ಕುರಿತು ಮಾಹಿತಿ ನೀಡಿದರು.

ಋತುಚಕ್ರಕ್ಕೆ ಸಂಬಂಧಿಸಿ ಗ್ರಾಮೀಣ ಪ್ರದೇಶಗಳಲ್ಲಿರುವ ತಪ್ಪು ಕಲ್ಪನೆಗಳನ್ನು ಕುರಿತು ಚರ್ಚಿಸಿದರು. ಹುಡುಗಿಯರು ಕೇಳಿದ ಪ್ರಶ್ನೆಗಳಿಗೆ ಸಲಹೆ- ಮಾರ್ಗದರ್ಶನ ನೀಡಿದರು. ಬಳಸಿದ ಕರವಸ್ತ್ರಗಳನ್ನು ಪರಿಸರ ಸ್ನೇಹಿ ರೀತಿಯಲ್ಲಿ ನಾಶ ಮಾಡುವಲ್ಲಿ ದಹನಕಾರಿಗಳ ಮಹತ್ವವನ್ನು ವಿವರಿಸಿದರು.

ಇನ್ನರ್ ವ್ಹೀಲ್ ಕಾರ್ಯದರ್ಶಿ ಸುವರ್ಣ ವಸ್ತ್ರದ, [illegible] ಮಂಜುಳಾ ಅಕ್ಕಿ, ಸದಸ್ಯೆಯರಾದ ಕಮಲಾ [illegible] ಮತ್ತು ವಿದ್ಯಾ ಗಂಜಿಹಾಳ ಹಾಗೂ ಮಹಾವಿದ್ಯಾಲಯದ ಗುಂಡಪ್ಪ ನಾಯಕ, ಆಶಾ ಕಾರ್ಯಕರ್ತೆ ಶಾರದಾ ತೋಟದ ಉಪಸ್ಥಿತರಿದ್ದರು.

ಇನ್ನರ್ ವ್ಹೀಲ್ ಕ್ಲಬ್ ಗದಗ-ಬೆಟಗೇರಿಯ ಅಧ್ಯಕ್ಷೆ ಸುಮಾ ಪಾಟೀಲ್ ಸಮಾರೋಪ ಮಾತುಗಳನ್ನಾಡಿ, ಋತುಚಕ್ರದ ಅವಧಿಯಲ್ಲಿ ಮಾನಸಿಕ ಹಾಗೂ ದೈಹಿಕ ಕ್ಷೋಭೆಗಳನ್ನು ಧೈರ್ಯವಾಗಿ ಎದುರಿಸುವುದು ಮತ್ತು ಸಾಂಪ್ರದಾಯಿಕ ಬಟ್ಟೆಗಳ ಬಳಕೆಯ ಬದಲಾಗಿ ಸ್ವಚ್ಛವಾದ ಕರವಸ್ತ್ರಗಳನ್ನು ಬಳಸುವುದು ಅತ್ಯವಶ್ಯ ಎಂದು ತಿಳಿಸಿದರು. ಇದೇ ವೇಳೆ 200 ನೈರ್ಮಲ್ಯಯುತ ಕರವಸ್ತ್ರಗಳನ್ನು ವಿತರಿಸಲಾಯಿತು.


CO-ORDINATOR
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College.
GADAG - BETGERI - 582 101

K.L.E. Society's
Arts and Commerce College, Gadag

Nagarik Newspaper 25-11-2020

# ಹರಿಹರೆಯದ ಹೆಣ್ಣು ಮಕ್ಕಳಿಗೆ ಮತ್ತು ಮಹಿಳೆಯರಿಗೆ ತಿಳುವಳಿಕೆ ಅವಶ್ಯ



ಗದಗ, ನ. 25. ಪ್ರಪಂಚದಾದ್ಯಂತ ಲಕ್ಷಾಂತರ ಹೆಣ್ಣು ಮಕ್ಕಳು ಮತ್ತು ಮಹಿಳೆಯರಲ್ಲಿ ಮಾಸಿಕ ಋತುಚಕ್ರದ ಮತ್ತು ವೈಯಕ್ತಿಕ ನೈರ್ಮಲ್ಯವನ್ನು ನಿಭಾಯಿಸುವಲ್ಲಿ ಅನೇಕರು ವಿಫಲರಾಗಿದ್ದಾರೆ.

ಆರೋಗ್ಯಕರ ರೀತಿಯಲ್ಲಿ ಅದರ ನಿರ್ವಹಣೆ ಅವರಿಗೆ ಅಸಾಧ್ಯವಾಗುತ್ತಿದೆ. ಇಂತಹ ವಿಷಯದಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸುವದು ಅನಿವಾರ್ಯವಾಗಿದೆ. ಅದರಲ್ಲೂ ಗ್ರಾಮೀಣ ಭಾಗದ ಹರಿಹರೆಯದ ಹೆಣ್ಣು ಮಕ್ಕಳಿಗೆ ಮತ್ತು ಮಹಿಳೆಯರಿಗೆ ತಿಳುವಳಿಕೆ ಅತೀ ಅವಶ್ಯವಾಗಿದೆ.

ಈ ಹಿನ್ನಲೆಯಲ್ಲಿ ಗದುಗಿನ ಕೆ.ಎಲ್.ಇ. ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಯುಥ್ ರೆಡ್‌ಕ್ರಾಸ್ ಘಟಕ ಮತ್ತು ಗದಗ-ಬೆಟಗೇರಿ ಇನ್ನರ ವ್ಹೀಲ್‌ಕ್ಲಬ್ ಸಂಯುಕ್ತಾಶ್ರಯದಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ವೈಯಕ್ತಿಕ ಶುಚಿತ್ವದ ಬಗ್ಗೆ ತಿಳುವಳಿಕಾ ಕಾರ್ಯಕ್ರಮವನ್ನು ಬೆಳಧಡಿ ಬ್ರಹ್ಮಾನಂದಪುರತಾಂಡಾದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡ ಮಹಾವಿದ್ಯಾಲಯದ ಗೃಹ ವಿಜ್ಞಾನ ವಿಷಯದ ಪ್ರಾಧ್ಯಾಪಕರಾದ ವೀಣಾ ತಿರ್ಲಾಪೂರ ಅವರು ಋತು ಚಕ್ರದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಕಾಳಜಿ ಮತ್ತು ನೈರ್ಮಲ್ಯ ಕುರಿತಂತೆ ನಮ್ಮ ಭಾರತ ದೇಶದ ಗ್ರಾಮೀಣ ಪರಿಸರದ ಹೆಚ್ಚಿನ ಸಂಖ್ಯೆ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಈ ವಿಷಯವಾಗಿ ತಿಳುವಳಿಕೆ ಪಡೆಯುವುದು ಅವಶ್ಯವಾಗಿದೆ.

ಋತು ಚಕ್ರದ ಸಮಯ, ಅವಧಿಯ ಲೆಕ್ಕಾಚಾರ, ಈ ಅವಧಿಯಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ದೈಹಿಕ ತೊಂದರೆಗಳು ಮತ್ತು ಅದನ್ನು ನಿಭಾಯಿಸುವ ವಿಧಾನಗಳು, ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವದು, ಕಾಪಾಡಿಕೊಳ್ಳುವ ಅವಧಿ ಮತ್ತು ಪ್ರಾಮುಖ್ಯತೆ, ಕೊಳಕು ಬಟ್ಟೆಗಳನ್ನು ಬಳಸುವ ಸಾಂಪ್ರದಾಯಿಕ ವಿಧಾನಗಳನ್ನು ತಪ್ಪಿಸುವುದು ಮತ್ತು ನೈರ್ಮಲ್ಯ ಕರವಸ್ತ್ರದ ಬಳಕೆಯನ್ನು ಪ್ರೋತ್ಸಾಹಿಸುವದು ಮುಂತಾದ ವಿಷಯಗಳನ್ನು ಕುರಿತು ಅರ್ಥ ಪೂರ್ಣವಾದ ಮಹತ್ವದ ಮಾಹಿತಿ ತಿಳಿಸಿಕೊಟ್ಟರು.

ಈ ಋತುಚಕ್ರ ಸಂಬಂಧಿತಗ್ರಾಮೀಣ ಪ್ರದೇಶಗಳಲ್ಲಿರುವ ಸಾಂಪ್ರದಾಯಿಕ ಪುರಾಣಗಳು ಮತ್ತು ತಪ್ಪು ಕಲ್ಪನೆಗಳನ್ನು ಕುರಿತು ಚರ್ಚಿಸಿದರು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಣ್ಣು ಗ್ರಾಮೀಣ ಪ್ರದೇಶಗಳಲ್ಲಿರುವ ಸಾಂಪ್ರದಾಯಿಕ ಪುರಾಣಗಳು ಮತ್ತುತಪ್ಪು ಕಲ್ಪನೆಗಳನ್ನು ಕುರಿತು ಚರ್ಚಿಸಿದರು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಹುಡುಗಿಯರು ಕೇಳಿದ ಪ್ರಶ್ನೆಗಳಿಗೆ ಸಲಹೆ ಮಾರ್ಗದರ್ಶನ ಮಾಡಿದರು. ಬಳಸಿದ ಕರವಸ್ತ್ರಗಳನ್ನು ಪರಿಸರ ಸ್ವಚ್ಛತೆಯ ಹಿನ್ನೆಲೆಯಲ್ಲಿ ನಾಶ ಮಾಡುವಲ್ಲಿ ದಹನಕಾರಿಗಳ ಮಹತ್ವವನ್ನು ವಿವರಿಸಿದರು.

ಇನ್ನರ್‌ವ್ಹೀಲ್ ಕಾರ್ಯದರ್ಶಿ ಸುವರ್ಣ ವಸ್ತ್ರದ, ಖಜಾಂಚಿ ಅಶ್ವಿನಿ ಜಗತಾಪ, ಐ.ಎಸ್.ಓ. ಮಂಜುಳಾ ಅಕ್ಕಿ, ಸದಸ್ಯೆಯರಾದ ಕಮಲಾ ಜಂಬಗಿ ಮತ್ತು ವಿದ್ಯಾ ಗಂಜಿಹಾಳ ಹಾಗೂ ಮಹಾವಿದ್ಯಾಲಯದ ಗುಂಡಪ್ಪ ನಾಯಕ, ಆಶಾ ಕಾರ್ಯಕರ್ತೆ ಶಾರದಾತೋಟದ ಉಪಸ್ಥಿತರಿದ್ದರು.

ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿಯ ಅಧ್ಯಕ್ಷರಾದ ಸುಮಾ ಪಾಟೀಲರವರು ಸಮಾರೋಪ ಮಾತುಗಳನ್ನಾಡಿ ಈ ಸಂದರ್ಭದಲ್ಲಿ ಮಾನಸಿಕ ಹಾಗೂ ದೈಹಿಕ ಸ್ಥಿತ್ಯಂತರಗಳನ್ನು ಧೈರ್ಯವಾಗಿ ಎದುರಿಸುವದು ಮತ್ತು ಸಾಂಪ್ರದಾಯಿಕ ಬಟ್ಟೆಗಳ ಬಳಕೆಗಳ ಬದಲಾಗಿ ನೈರ್ಮಲ್ಯಯುತವಾದ ಕರವಸ್ತ್ರಗಳನ್ನು ಬಳಸುವದು ಅತ್ಯುಪಯುಕ್ತವಾದುದು ಎಂದು ತಿಳಿಸಿದರು. ತದನಂತರ 200 ನೈರ್ಮಲ್ಯಯುತ ಕರವಸ್ತ್ರಗಳನ್ನು ವಿತರಿಸಲಾಯಿತು.


CO-ORDINATOR
IQAC
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College
GADAG - BETGERI - 582 101

K.L.E. Society's
Arts and Commerce College, Gadag

Kittur Karnataka Newspaper 25-11-2020

# ಋತುಚಕ್ರದ ಕಾಳಜಿ ಹಾಗೂ ನೈರ್ಮಲ್ಯ ಅಗತ್ಯ



ಗದಗ, ೨೫ : ಪ್ರಪಂಚದಾದ್ಯಂತ ಲಕ್ಷಾಂತರ ಹೆಣ್ಣು ಮಕ್ಕಳು ಮತ್ತು ಮಹಿಳೆಯರಲ್ಲಿ ಮಾಸಿಕ ಋತುಚಕ್ರದ ಮತ್ತು ವೈಯಕ್ತಿಕ ನೈರ್ಮಲ್ಯವನ್ನು ನಿಭಾಯಿಸುವಲ್ಲಿ ಅನೇಕರು ವಿಫಲರಾಗಿದ್ದಾರೆ. ಆರೋಗ್ಯಕರ ರೀತಿಯಲ್ಲಿ ಅದರ ನಿರ್ವಹಣೆ ಅವರಿಗೆ ಅಸಾಧ್ಯವಾಗುತ್ತಿದೆ. ಇಂತಹ ವಿಷಯದಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸುವದು ಅನಿವಾರ್ಯವಾಗಿದೆ. ಅದರಲ್ಲೂ ಗ್ರಾಮೀಣ ಭಾಗದ ಹರಿಹರೆಯದ ಹೆಣ್ಣು ಮಕ್ಕಳಿಗೆ ಮತ್ತು ಮಹಿಳೆಯರಿಗೆ ತಿಳುವಳಿಕೆ ಅತೀ ಅವಶ್ಯವಾಗಿದೆ. ಈ ಹಿನ್ನಲೆಯಲ್ಲಿ ಗದುಗಿನ ಕೆ.ಎಲ್.ಇ. ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ "ಯುಥ್ ರೆಡ್ ಕ್ರಾಸ್" ಘಟಕ ಮತ್ತು ಗದಗ-ಬೆಟಗೇರಿ ಇನ್ನರ ವ್ಹೀಲ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ವೈಯಕ್ತಿಕ ಶುಚಿತ್ವದ ಬಗ್ಗೆ ತಿಳುವಳಿಕಾ ಕಾರ್ಯಕ್ರಮವನ್ನು ಬೆಳಧಡಿ ಬ್ರಹ್ಮಾನಂದಪುರ ತಾಂಡಾದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡ ಮಹಾವಿದ್ಯಾಲಯದ ಗೃಹ ವಿಜ್ಞಾನ ವಿಷಯದ ಪ್ರಾಧ್ಯಾಪಕರಾದ ಶ್ರೀಮತಿ ವೀಣಾ ತಿರ್ಲಾಪೂರ ಋತುಚಕ್ರದ ಸಮಯದಲ್ಲಿ ತೆಗೆದುಕೊಳ್ಳಬೇಕಾದ ಕಾಳಜಿ ಮತ್ತು ನೈರ್ಮಲ್ಯ ಕುರಿತಂತೆ ನಮ್ಮ ಭಾರತ ದೇಶದ ಗ್ರಾಮೀಣ ಪರಿಸರದ ಹೆಚ್ಚಿನ ಸಂಖ್ಯೆ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಈ ವಿಷಯವಾಗಿ ತಿಳುವಳಿಕೆ ಪಡೆಯುವುದು ಅವಶ್ಯವಾಗಿದೆ. ಋತು ಚಕ್ರದ ಸಮಯ, ಅವಧಿಯ ಲೆಕ್ಕಾಚಾರ, ಈ ಅವಧಿಯಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ದೈಹಿಕ ತೊಂದರೆಗಳು ಮತ್ತು ಅದನ್ನು ನಿಭಾಯಿಸುವ ವಿಧಾನಗಳು. ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು. ಕಾಪಾಡಿಕೊಳ್ಳುವ ಅವಧಿ ಮತ್ತು ಪ್ರಾಮುಖ್ಯತೆ, ಕೊಳಕು ಬಟ್ಟೆಗಳನ್ನು ಬಳಸುವ ಸಾಂಪ್ರದಾಯಿಕ ವಿಧಾನಗಳನ್ನು ತಪ್ಪಿಸುವುದು ಮತ್ತು ನೈರ್ಮಲ್ಯ ಕರವಸ್ತ್ರದ ಬಳಕೆಯನ್ನು ಪ್ರೋತ್ಸಾಹಿಸುವದು ಮುಂತಾದ ವಿಷಯಗಳನ್ನು ಕುರಿತು ಅರ್ಥಪೂರ್ಣವಾದ ಮಹತ್ವದ ಮಾಹಿತಿ ತಿಳಿಸಿಕೊಟ್ಟರು. ಈ ಋತುಚಕ್ರ ಸಂಬಂಧಿತ ಗ್ರಾಮೀಣ ಪ್ರದೇಶಗಳಲ್ಲಿರುವ ಸಾಂಪ್ರದಾಯಿಕ ಪುರಾಣಗಳು ಮತ್ತು ತಪ್ಪು ಕಲ್ಪನೆಗಳನ್ನು ಕುರಿತು ಚರ್ಚಿಸಿದರು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಣ್ಣು ಗ್ರಾಮೀಣ ಪ್ರದೇಶಗಳಲ್ಲಿರುವ ಸಾಂಪ್ರದಾಯಿಕ ಪುರಾಣಗಳು ಮತ್ತು ತಪ್ಪು ಕಲ್ಪನೆಗಳನ್ನು ಕುರಿತು ಚರ್ಚಿಸಿದರು ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಹುಡುಗಿಯರು ಕೇಳಿದ ಪ್ರಶ್ನೆಗಳಿಗೆ ಸಲಹೆ ಮಾರ್ಗದರ್ಶನ ಮಾಡಿದರು. ಬಳಸಿದ ಕರವಸ್ತ್ರಗಳನ್ನು ಪರಿಸರ ಸ್ವಚ್ಛತೆಯ ಹಿನ್ನಲೆಯಲ್ಲಿ ನಾಶ ಮಾಡುವಲ್ಲಿ ದಹನಕಾರಿಗಳ ಮಹತ್ವವನ್ನು ವಿವರಿಸಿದರು.

ಇನ್ನರ್ ವ್ಹೀಲ್ ಕಾರ್ಯದರ್ಶಿಯಾದ ಶ್ರೀಮತಿ ಸುವರ್ಣ ವಸ್ತ್ರದ, ಖಜಾಂಚಿ ಶ್ರೀಮತಿ ಅಶ್ವಿನಿ ಜಗತಾಪ, ಐ.ಎಸ್.ಓ. ಶ್ರೀಮತಿ ಮಂಜುಳಾ ಅಕ್ಕಿ, ಸದಸ್ಯೆಯರಾದ ಶ್ರೀಮತಿ ಕಮಲಾ ಜಂಬಗಿ ಮತ್ತು ವಿದ್ಯಾ ಗಂಜಿಹಾಳ ಹಾಗೂ ಮಹಾವಿದ್ಯಾಲಯದ ಶ್ರೀ ಗುಂಡಪ್ಪ ನಾಯಕ, ಆಶಾ ಕಾರ್ಯಕರ್ತೆ ಶಾರದಾ ತೋಟದ ಉಪಸ್ಥಿತರಿದ್ದರು.

ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿಯ ಅಧ್ಯಕ್ಷರಾದ ಶ್ರೀಮತಿ ಸುಮಾ ಪಾಟೀಲರವರು ಸಮಾರೋಪ ಮಾತುಗಳನ್ನಾಡಿ ಈ ಸಂದರ್ಭದಲ್ಲಿ ಮಾನಸಿಕ ಹಾಗೂ ದೈಹಿಕ ಸ್ಥಿತ್ಯಂತರಗಳನ್ನು ಧೈರ್ಯವಾಗಿ ಎದುರಿಸುವದು ಮತ್ತು ಸಾಂಪ್ರದಾಯಿಕ ಬಟ್ಟೆಗಳ ಬಳಕೆಗಳ ಬದಲಾಗಿ ನೈರ್ಮಲ್ಯಯುಕ್ತವಾದ ಕರವಸ್ತ್ರಗಳನ್ನು ಬಳಸುವದು ಅತ್ಯುಪಯುಕ್ತವಾದುದು ಎಂದು ತಿಳಿಸಿದರು. ತದನಂತರ ೨೦೦ ನೈರ್ಮಲ್ಯಯುತ ಕರವಸ್ತ್ರಗಳನ್ನು ವಿತರಿಸಲಾಯಿತು.

CO-ORDINATOR
IQAC
K.L.E.S' Arts & Commerce College
GADAG

PRINCIPAL
K. L. E. Society's
Arts & Commerce College
GADAG - BETGERI - 582 101